# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 325 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 03.02.2021 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ವಿಶ್ವಕರ್ಮ ಜನಾಂಗದ ಜನಸಂಖ್ಯೆ ಎಷ್ಟು; ಅದರಲ್ಲಿ ಪುರುಷರೆಷ್ಟು; ಮಹಿಳೆಯರೆಷ್ಟು; ಸರ್ಕಾರಿ ಉದ್ಯೋಗದಲ್ಲಿರುವವರು ಎಷ್ಟು; ಈ ಸಮುದಾಯಕ್ಕೆ ನೇಮಕಾತಿಯಲ್ಲಿ ಕಾಯ್ದಿರಿಸಿದ ಸ್ಥಾನ ಎಷ್ಟು; | ವಿಶ್ವಕರ್ಮ ಜನಾಂಗದ ಜನಸಂಖ್ಯೆ ವಿವರ ಆಯೋಗದಲ್ಲಿ ಲಭ್ಯವಿರುವುದಿಲ್ಲ.<br><br>ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವತಿಯಿಂದ 2015ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ವಿಶ್ವಕರ್ಮ ಜನಾಂಗವನ್ನೊಳಗೊಂಡಂತೆ ಎಲ್ಲಾ ಜಾತಿ/ಜನಾಂಗಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಆಯೋಗವು ವರದಿಯನ್ನು ಸಿದ್ಧಪಡಿಸಿದ್ದು, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿ:30.03.2002ರಲ್ಲಿ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಪ್ರವರ್ಗವಾರು ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಅದರಂತೆ, ಪ್ರವರ್ಗ-2ಎ ರಡಿ ವಿಶ್ವಕರ್ಮ ಜನಾಂಗವು ಸೇರಿರುತ್ತದೆ. ಸದರಿ ಪ್ರವರ್ಗಕ್ಕೆ ಶೇಕಡ 15 ರಷ್ಟು ಮೀಸಲಾತಿಯನ್ನು ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಅವಕಾಶ ಮಾಡಿಕೊಡಲಾಗಿರುತ್ತದೆ. |
| ಆ) | ಹಿಂದುಳಿದ ವರ್ಗಕ್ಕೆ ಸೇರುವ ಒಟ್ಟು ಜನಸಂಖ್ಯೆ ಎಷ್ಟು; ಅದೇ ರೀತಿ ಎಸ್.ಸಿ. ಎಸ್.ಟಿ ಸಾಮಾನ್ಯವರ್ಗದ ಶೇಕಡವಾರು ಜನಸಂಖ್ಯೆ ಪ್ರಮಾಣ ಎಷ್ಟು; | 2011ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪ ಸಂಖ್ಯಾತರಿಗೆ ಸಂಬಂಧಿಸಿದ ಜನಸಂಖ್ಯೆ ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ. ಹಿಂದುಳಿದ ಜಾತಿಗಳಿಗೆ (ಒಬಿಸಿ) ಸಂಬಂಧಿಸಿದ ಮಾಹಿತಿಯು 2011ರ ಜನಗಣತಿಯ ಪ್ರಕಾರ ಲಭ್ಯವಿರುವುದಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪ ಸಂಖ್ಯಾತರ ಮತ್ತು ಇತರೆ ಜನಸಂಖ್ಯೆಯು 2011ರ ಪ್ರಕಾರ ಈ ಕೆಳಕಂಡಂತಿರುತ್ತದೆ. |

<table>
<tr><td></td><td></td><td>
<table>
<tr><td>ವಿವರ</td><td>ಜನಸಂಖ್ಯೆ:</td><td>ಶೇಕಡವಾರು ಜನಸಂಖ್ಯೆ</td></tr>
<tr><td>ಪರಿಶಿಷ್ಟ ಜಾತಿ (SC)</td><td>10474992</td><td>17.15%</td></tr>
<tr><td>ಪರಿಶಿಷ್ಟ ಪಂಗಡ (ST)</td><td>4248987</td><td>06.95%</td></tr>
<tr><td>ಅಲ್ಪ ಸಂಖ್ಯಾತರು (Minorities)</td><td>9611738</td><td>15.73%</td></tr>
<tr><td>ಇತರೆ</td><td>36759580</td><td>60.17%</td></tr>
<tr><td>ಒಟ್ಟು ಜನಸಂಖ್ಯೆ</td><td>61095297</td><td></td></tr>
</table>
</td></tr>
<tr><td>ಇ)</td><td>ಶೇಕಡವಾರು ಪ್ರಮಾಣಕ್ಕೆ ಅನುಗುಣವಾಗಿ ನೇಮಕಾತಿಯಲ್ಲಿರುವ Reservation ಮಾಡದೇ ಇರುವುದರಿಂದ ಹಿಂದುಳಿದ ವರ್ಗದವರು ಮೀಸಲಾತಿಯಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>
ರಿಟ್ ಅರ್ಜಿ ಸಂಖ್ಯೆ: 438/94ರಲ್ಲಿ ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದಂತೆ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನೊಳಗೊಂಡಂತೆ ಒಟ್ಟಾರೆ ಮೀಸಲಾತಿಯು ಶಿಕ್ಷಣ ಮತ್ತು ಉದ್ಯೋಗಕ್ಕೆ ಶೇಕಡ 50 ಕ್ಕೆ ಮೀರಬಾರದೆಂದು ಆದೇಶಿಸಲಾಗಿದೆ.<br><br>
ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿ: 30.03.2002ರಲ್ಲಿ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಪ್ರವರ್ಗವಾರು ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ವಿವರ ಈ ಕೆಳಗಿನಂತಿರುತ್ತದೆ.
<table>
<tr><td>ಪ್ರವರ್ಗ-I</td><td>4 %</td></tr>
<tr><td>ಪ್ರವರ್ಗ-II (ಎ)</td><td>15 %</td></tr>
<tr><td>ಪ್ರವರ್ಗ-II (ಬಿ)</td><td>4 %</td></tr>
<tr><td>ಪ್ರವರ್ಗ-III (ಎ)</td><td>4 %</td></tr>
<tr><td>ಪ್ರವರ್ಗ-III (ಬಿ)</td><td>5 %</td></tr>
<tr><td>ಒಟ್ಟು</td><td>32%</td></tr>
</table>
</td></tr>
<tr><td>ಈ)</td><td>ಹಾಗಿದ್ದಲ್ಲಿ ಸರ್ಕಾರದ ಕ್ರಮಗಳೇನು.</td><td>ಅನ್ವಯಿಸುವುದಿಲ್ಲ.</td></tr>
</table>

**ಸಂಖ್ಯೆ:**ಹಿಂವಕ 23 ಬಿಸಿಎ 2021

(ಕೋಟಾ ಶ್ರೀನಿವಾಸ ಪೂಜಾರಿ)
ಮುಜುರಾಯಿ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು